## ಕರ್ನಾಟಕ ಲೋಕಾಯುಕ್ತ

**ಕಂಪ್ಲೆಂಟ್/ಉಪಲೋಕ್/ಬಿಸಿಡಿ/1875/2021**
**ಪಿಒ.ಎ.ಆರ್.ಇ-5 (ಮಂಡನಾಧಿಕಾರಿಯವರ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 27/04/2022.

28

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ. ಬಿ.ಎಸ್. ವೆಂಕಟಾಚಲಪತಿ ಬಿನ್ ಸಿದ್ದಲಿಂಗಪ್ಪ, ವಿಶೇಷ ತಹಶೀಲ್ದಾರ್ ಹಾಗೂ ಕಾರ್ಯನಿರ್ವಾಹಕ ದಂಡಾಧಿಕಾರಿ, ಬೆಂಗಳೂರು ದಕ್ಷಿಣ ತಾಲ್ಲೂಕು, 1ನೇ ಮಹಡಿ, ಕಂದಾಯ ಭವನ, ಬೆಂಗಳೂರು,**

ಆದ ನೀವು ಸರ್ಕಾರಿ/ ಸಾರ್ವಜನಿಕ ನೌಕರರಾಗಿದ್ದು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ನಿಮ್ಮ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ ಬೆಂಗಳೂರು ನಗರ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ. **ಶ್ರೀ. ಬಿ.ಎಸ್. ವೆಂಕಟಾಚಲಪತಿ ಬಿನ್ ಸಿದ್ದಲಿಂಗಪ್ಪ, ವಿಶೇಷ ತಹಶೀಲ್ದಾರ್ ಹಾಗೂ ಕಾರ್ಯನಿರ್ವಾಹಕ ದಂಡಾಧಿಕಾರಿ, ಬೆಂಗಳೂರು ದಕ್ಷಿಣ ತಾಲ್ಲೂಕು, 1ನೇ ಮಹಡಿ, ಕಂದಾಯ ಭವನ, ಬೆಂಗಳೂರು,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ. ಹೆಚ್. ಪಿ. ಮಂಜುನಾಥ್ ಬಿನ್ ಎಂ. ಪಾಪಣ್ಣ, ಹುಳಿಮಾವು, ಬನ್ನೇರುಘಟ್ಟ ರೋಡ್, ಬೆಂಗಳೂರು,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಕಚೇರಿಯಲ್ಲಿ ದೂರುದಾರರ ತಂದೆ ಹಾಗೂ ಅವರ ಸಹೋದರರ ಮಕ್ಕಳ ನಡುವೆ ಗೊಟ್ಟಿಗೆರೆ ಗ್ರಾಮ ರಿ.ಸ.ನಂ.56 ವಿಸ್ತೀರ್ಣ 1 ಎಕರೆ 37 ಗುಂಟೆ ಇದಕ್ಕೆ ಸಂಬಂಧಿಸಿದಂತೆ ಪ್ರಕರಣವು ಆರ್.ಆರ್.ಟಿ. ನಂ.55/2013-14 ರಲ್ಲಿ ಆದೇಶಕ್ಕಾಗಿ ಬಾಕಿ ಇದ್ದು, ಅದನ್ನು ದೂರುದಾರರ ಪರವಾಗಿ ಆದೇಶ ಮಾಡಲು 20 ಲಕ್ಷ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ಬೆಂಗಳೂರು ನಗರ ಜಿಲ್ಲೆ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 50/2017 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 8, 13(1)(ಡಿ), ರೆ/ವಿ. 13(2) ಅಡಿಯಲ್ಲಿ

ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 20,00,000/-ರೂ.ಗಳಿಗೆ ಬೇಡಿಕೆ ಇಟ್ಟು, 15,00,000/- ರೂ.ಗೆ ಸಮ್ಮತಿಸಿ, ನಿಮ್ಮ ಖಾಸಗಿ ಸಹಾಯಕನಾದ ಮಧುಸೂದನ್ ಬಿ.ಆರ್. ಇವರಿಗೆ ನಿಮ್ಮ ಪರವಾಗಿ 5,00,000/- ರೂ. ಮುಂಗಡವಾಗಿ ಪಡೆಯಲು ಸೂಚಿಸಿದ ಮೇರೆಗೆ ಆತನು ದೂರುದಾರರಿಂದ 5,00,000/- ರೂ. ಪಡೆದುಕೊಳ್ಳುವ ಕಾಲಕ್ಕೆ ರೆಡ್‌ಹ್ಯಾಂಡಾಗಿ ಸಿಕ್ಕು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಇವರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಹೆಚ್. ಪಿ. ಮಂಜುನಾಥ್ ಬಿನ್ ಎಂ. ಪಾಪಣ್ಣ, ಹುಳಿಮಾವು, ಬನ್ನೇರುಘಟ್ಟ ರೋಡ್, ಬೆಂಗಳೂರು,** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಕಚೇರಿಯಲ್ಲಿ ದೂರುದಾರರ ತಂದೆ ಹಾಗೂ ಅವರ ಸಹೋದರರ ಮಕ್ಕಳ ನಡುವೆ ಗೊಟ್ಟಿಗೆರೆ ಗ್ರಾಮ ರಿ.ಸ.ನಂ.56 ವಿಸ್ತೀರ್ಣ 1 ಎಕರೆ 37 ಗುಂಟೆ ಇದಕ್ಕೆ ಸಂಬಂಧಿಸಿದಂತೆ ಪ್ರಕರಣವು ಆರ್.ಆರ್.ಟಿ. ನಂ.55/2013-14 ರಲ್ಲಿ ಆದೇಶಕ್ಕೆ ಬಾಕಿಯಿದ್ದು, ದಿ: 08/12/2017 ರಂದು ಎದುರುದಾರರನ್ನು ಭೇಟಿಯಾಗಿ ತಮ್ಮ ಪರವಾಗಿ ಆದೇಶ ನೀಡಲು ವಿನಂತಿಸಿಕೊಂಡಾಗ ಎದುರುದಾರರು ತಮ್ಮ ಖಾಸಗಿ ಸಹಾಯಕ ಮಧುಸೂದನ್ ಇವರನ್ನು ಕರೆದು, ಅವರ ಹತ್ತಿರ ಮಾತನಾಡಲು ತಿಳಿಸಿದ್ದು, ಮಧುಸೂದನ್‌ರವರು ಎದುರುದಾರರ ಪರವಾಗಿ, 20 ಲಕ್ಷ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ನಂತರ ದಿ: 11/12/2017 ರಂದು ಪುನ: ಎದುರುದಾರರನ್ನು ಭೇಟಿಯಾದಾಗ ಎದುರುದಾರರು ಹಾಗೂ ಅವರ ಖಾಸಗಿ ಸಹಾಯಕ ಮಧುಸೂದನ್‌ರವರು 15 ಲಕ್ಷ ರೂಪಾಯಿ ಲಂಚಕ್ಕೆ ಸಮ್ಮತಿಸಿ, 5 ಲಕ್ಷ ರೂಪಾಯಿ ಮುಂಗಡವಾಗಿ ಕೊಟ್ಟಲ್ಲಿ, ತಮ್ಮ ಪರವಾಗಿ ಆದೇಶ ಹೊರಡಿಸುವುದಾಗಿ, ಬಾಕಿ ಹಣವನ್ನು ಕೊಟ್ಟ ನಂತರ ಆದೇಶದ ಪ್ರತಿಯನ್ನು ನೀಡುವುದಾಗಿ ತಿಳಿಸಿದ್ದು, ಸದರಿ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 15/12/2017 ರಂದು ಬೆಂಗಳೂರು ನಗರ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು

ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.50/2017 ರಲ್ಲಿ ಕಲಂ 7, 8, 13(1)(ಡಿ), ರೆ/ವಿ. 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಎನ್. ಶ್ರೀನಿವಾಸ್ (ನೆರಳುಸಾಕ್ಷಿ) 2) ಬಿ.ಜೆ. ಗಿರೀಶ್ ಇವರುಗಳನ್ನು ದಿ:15/12/2017 ರಂದು ಬರಮಾಡಿಕೊಂಡಿದ್ದು, ಅಂದು ಸಾಯಂಕಾಲವಾಗಿದ್ದರಿಂದ ನಾಳೆ ಅಂದರೆ 16/12/2017 ರಂದು ಬೆಳಿಗ್ಗೆ 10 ಗಂಟೆಗೆ ಠಾಣೆಯಲ್ಲಿ ವರದಿಮಾಡಿಕೊಳ್ಳಲು ತಿಳಿಸಿದ ಮೇರೆಗೆ, ಪಂಚರು, ದೂರುದಾರರು ಠಾಣೆಗೆ ಹಾಜರಾಗಿರುತ್ತಾರೆ. ದೂರುದಾರರನ್ನು ಪಂಚರಿಗೆ ಪರಿಚಯಿಸಿ, ದೂರನ್ನು ಪಂಚರಿಗೆ ಓದಲು ನೀಡಿರುತ್ತಾರೆ. ದೂರುದಾರರು ಪಂಚರ ಸಮಕ್ಷಮ ಡಿ.ವಿ.ಡಿ.ಯನ್ನು ಹಾಜರುಪಡಿಸಿದ್ದು, ಅದರಲ್ಲಿದ್ದ ಸಂಭಾಷಣೆ ಹಾಗೂ ವೀಡಿಯೋವನ್ನು ತನಿಖಾಧಿಕಾರಿಗಳು ಸಿಬ್ಬಂದಿಗಳ ಮೂಲಕ ಲಿಪಿಕರಿಸಿಕೊಂಡು, ಸಿ.ಡಿ.ಗೆ ವರ್ಗಾಯಿಸಿ ಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು 15 ಲಕ್ಷ ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ ರೂ. 5,00,000/- (2000X250) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಬೆರಳಚ್ಚು ಮಾಡಿಸಿದ್ದು, ಪಂಚರು ತಾಳೆ ಮಾಡಿ ಖಾತರಿ ಪಡಿಸಿಕೊಂಡಿರುತ್ತಾರೆ. ಪೊಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಬಿ.ಜೆ. ಗಿರೀಶ್ ರವರ ಮೂಲಕ ದೂರುದಾರರ ಪ್ಯಾಂಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಬಿ.ಜೆ. ಗಿರೀಶ್ ರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಎನ್. ಶ್ರೀನಿವಾಸ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ದೂರುದಾರರಿಗೆ ವಾಯ್ಸ್ ರೆಕಾರ್ಡರ್ ಕೊಟ್ಟು ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 16-12-2017 ರಂದು ಬೆಳಿಗ್ಗೆ 10.00 ರಿಂದ 1.00

ಘಂಟೆಯವರೆಗೆ ಬೆಂಗಳೂರು ನಗರ ಎಸಿಬಿ ಕಛೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ಬೆಂಗಳೂರಿನಲ್ಲಿರುವ ಕಂದಾಯ ಭವನವನ್ನು ಮಧ್ಯಾಹ್ನ 1.25 ಘಂಟೆಗೆ ತಲುಪಿ, ಎದುರುದಾರರ ಕಾರ್ಯಾಲಯದಿಂದ ಸ್ವಲ್ಪ ದೂರದಲ್ಲಿ ಜೀಪ್ ನಿಲ್ಲಿಸಿ, ದೂರುದಾರರನ್ನು ಹಾಗೂ ನೆರಳುಸಾಕ್ಷಿ ಎನ್. ಶ್ರೀನಿವಾಸ್ ಇವರುಗಳನ್ನು ಎದುರುದಾರರು ಕೆಲಸ ಮಾಡುವ ಕಂದಾಯ ಭವನದ ಒಳಗೆ ಕಳುಹಿಸಿ, ದಾಳಿ ತಂಡದವರು ಸಾರ್ವಜನಿಕರಂತೆ ಕಂದಾಯ ಭವನದ ಪ್ಯಾಸೇಜ್‌ನಲ್ಲಿ ಸಂಶಯಬರದಂತೆ ನಿಂತಿರುತ್ತಾರೆ. ಎದುರುದಾರರು ಕಾರ್ಯಾಲಯದಲ್ಲಿ ಇಲ್ಲವೆಂದು ಹಾಗೂ ಯಾವುದೋ ಕಟ್ಟಡವನ್ನು ಡೆಮಾಲಿಷನ್ ಮಾಡಲು ಹೋಗಿದ್ದು, ಸಾಯಂಕಾಲ ಬರಬಹುದೆಂದು ಎದುರುದಾರರ ಸಿಬ್ಬಂದಿ ತಿಳಿಸಿದ್ದು, ಸದರಿ ವಿಚಾರವನ್ನು ತನಿಖಾಧಿಕಾರಿಗೆ ತಿಳಿಸಲಾಗಿ, ಕಚೇರಿಯ ಅವಧಿ ಮುಗಿಯುವವರೆಗೂ ಕಾಯೋಣವೆಂದು ತನಿಖಾಧಿಕಾರಿ ಹೇಳಿದ್ದು, ಕಚೇರಿ ಅವಧಿ ಮುಗಿದರೂ ಎದುರುದಾರರ ಬರಲಿಲ್ಲವಾದ್ದರಿಂದ, ವಾಪಸ್ಸು ಎಸಿಬಿ ಕಚೇರಿಗೆ ತೆರಳಿ, ಸಾಯಂಕಾಲ 6.25 ರಿಂದ 7.25 ರವರೆಗೆ ಆ ಕುರಿತಂತೆ ಮಹಜರು ಕ್ರಮ ಜರುಗಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರು ಹಾಗೂ ಪಂಚರಿಗೆ ದಿ: 18/12/2017 ರಂದು ಬೆಳಿಗ್ಗೆ 10 ಗಂಟೆಗೆ ಠಾಣೆಗೆ ವರದಿ ಮಾಡಿಕೊಳ್ಳಲು ತಿಳಿಸಿದ ಪ್ರಕಾರ ವರದಿ ಮಾಡಿಕೊಂಡಿರುತ್ತಾರೆ.

ಪಂಚರು ಹಣವನ್ನು ಈಗಾಗಲೇ ಬೆರಳಚ್ಚು ಮಾಡಿದ ದಾಖಲೆಯೊಂದಿಗೆ ನಂಬರುಗಳನ್ನು ತಾಳೆ ಮಾಡಿ ನೋಡಲಾಗಿ, ನೋಟುಗಳ ನಂಬರುಗಳು ಸರಿಯಾಗಿದ್ದು, ಸದರಿ ನೋಟುಗಳಿಗೆ ಸಿಬ್ಬಂದಿ ಫಿನಾಫ್ತಲಿನ್ ಪೌಡರ್ ಸವರಿ, ಸದರಿ ಹಣವನ್ನು ದೂರುದಾರರ ಪ್ಯಾಂಟ್ ಜೇಬಿನಲ್ಲಿ ಪಂಚ-2 ರವರು ಇಟ್ಟಿರುತ್ತಾರೆ. ತನಿಖಾಧಿಕಾರಿಗಳು ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡರನ್ನು ನೀಡಿರುತ್ತಾರೆ. ಸುಮಾರು 11.25ಕ್ಕೆ ದಾಳಿತಂಡದವರು ಕಂದಾಯ ಭವನವನ್ನು ತಲುಪಿ, ದೂರುದಾರರು ಹಾಗೂ ನೆರಳುಸಾಕ್ಷಿಯನ್ನು ಎದುರುದಾರರ ಕಚೇರಿಗೆ ಕಳುಹಿಸಿ, ದಾಳಿ ತಂಡದವರು ಪ್ಯಾಸೇಜ್‌ನಲ್ಲಿ ಸಾರ್ವಜನಿಕರಂತೆ ಅಲ್ಲಲ್ಲಿ ನಿಂತಿರುತ್ತಾರೆ. ಕಂದಾಯ ಭವನದ 1ನೇ ಮಹಡಿಯಲ್ಲಿ ಎದುರುದಾರರ ಕಚೇರಿಯಿದ್ದು, ದೂರುದಾರರು ಎದುರುದಾರರನ್ನು ಭೇಟಿ ಮಾಡಲಾಗಿ, ಎದುರುದಾರರು ತಮ್ಮ ಖಾಸಗಿ ಸಹಾಯಕ ಮಧುಸೂದನ್ ಇವರನ್ನು ಕರೆದು ದೂರುದಾರರಿಂದ ಹಣವನ್ನು ಸ್ವೀಕರಿಸುವಂತೆ ತಿಳಿಸಿದ್ದರ ಮೇರೆಗೆ,

ಮಧುಸೂದನ್‌ರವರು ದೂರುದಾರರನ್ನು ಕಂದಾಯ ಭವನದ ಹಿಂದೆ ಇರುವ ಡಿ.ಸಿ. ಕಟ್ಟಡದ 2ನೇ ಮಹಡಿಗೆ ಕರೆದುಕೊಂಡು ಹೋಗಿದ್ದು, ದಾಳಿತಂಡದವರು ಸಹ ಇವರನ್ನು ಹಿಂಬಾಲಿಸಿ ಹೋಗಿರುತ್ತಾರೆ. ಸದರಿ ಮಹಡಿಯ ಟಾಯ್ಲೆಟ್ ಮಧ್ಯಭಾಗದ ಪ್ಯಾಸೇಜ್‌ನಲ್ಲಿ ಸುಮಾರು ಮಧ್ಯಾಹ್ನ 2.10 ಗಂಟೆಯ ಸಮಯದಲ್ಲಿ ದೂರುದಾರರಿಂದ 5 ಲಕ್ಷ ಹಣವನ್ನು ಮಧುಸೂದನ್‌ರವರು ತಮ್ಮ ಬಲಗೈನಿಂದ ಪಡೆದು ಎರಡೂ ಕೈಗಳಿಂದ ಎಣಿಸಿ ತಮ್ಮ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ದೂರುದಾರರ ಸೂಚನೆಯ ಮೇರೆಗೆ ತಕ್ಷಣ ದಾಳಿತಂಡದವರು ದೂರುದಾರರು ಹಾಗೂ ಮಧುಸೂದನ್ ನಿಂತ ಸ್ಥಳಕ್ಕೆ ಬಂದು, ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ ಮಧುಸೂದನ್ ರವರಿಗೆ ತಿಳಿಸಿರುತ್ತಾರೆ. ಅಲ್ಲಿಂದ ಎದುರುದಾರರ ಕಚೇರಿಗೆ ಮಧುಸೂದನ್ ಸಮೇತ ಬಂದಿದ್ದು, ಆ ಕಾಲಕ್ಕೆ ಎದುರುದಾರರು ತಮ್ಮ ಕಚೇರಿಯಲ್ಲಿ ಇದ್ದು, ಇವರೇ ವೆಂಕಟಾಚಲಪತಿ, ಇವರೇ ಮಧುಸೂದನ್ ಇವರನ್ನು ಕರೆದು ನನ್ನಿಂದ ಹಣವನ್ನು ಪಡೆದುಕೊಳ್ಳುವಂತೆ ತಿಳಿಸಿರುತ್ತಾರೆ ಎಂದು ದೂರುದಾರರು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ತಮ್ಮ ಪರಿಚಯ ಮಾಡಿಕೊಂಡು, ಮಧುಸೂದನ್ ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಪಂಚ-1 ಶ್ರೀನಿವಾಸ್ ಇವರು ತನಿಖಾಧಿಕಾರಿ ಸೂಚನೆ ಮೇರೆಗೆ ಮಧುಸೂದನ್ ಇವರ ಪ್ಯಾಂಟ್‌ಜೇಬಿನಿಂದ ಹಣವನ್ನು ತೆಗೆದು ನೋಟುಗಳ ನಂಬರುಗಳನ್ನು ತಾಳೆಮಾಡಿ ನೋಡಲಾಗಿ, ಅವು ತಾಳೆ ಹೊಂದಿದ್ದರಿಂದ, ನೋಟುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಮಧುಸೂದನ್ ಇವರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆಮಾಡಿ, ಪ್ಯಾಂಟನ್ನು ಕೂಡ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಲಂಚ ನೀಡುವ ಕಾಲಕ್ಕೆ ರೆಕಾರ್ಡ್ ಮಾಡಿಕೊಂಡ ಸಂಭಾಷಣೆಯನ್ನು ಲಿಪಿಕರಿಸಿ ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಎದುರುದಾರರು ಹಾಗೂ ಮಧುಸೂದನ್ ಇವರ ಮಾದರಿ ಧ್ವನಿಯನ್ನು 6 ಬಾರಿ ಓದಿಸುವ ಮೂಲಕ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಓದಲು ಬರುವುದಿಲ್ಲವಾದ್ದರಿಂದ, ಸದರಿಯವರಿಗೆ ಮಾತನಾಡಲು ತಿಳಿಸಿ, ಸದರಿಯವರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ ಮತ್ತು ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಕಡತದ ಬಗ್ಗೆ ವಿಚಾರಿಸಲಾಗಿ, ಎದುರುದಾರರು ಕಡತವನ್ನು ಹಾಜರುಪಡಿಸಿದ್ದು, ಅವುಗಳ ಪ್ರತಿಗಳನ್ನು ತಯಾರಿಸಿ, ಸದರಿ ಪ್ರತಿಗಳನ್ನು ಮಂಜುನಾಥ್ ಗ್ರೇಡ್-2 ತಹಶೀಲ್ದಾರ್ ಇವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. ಎದುರುದಾರರು ಆದೇಶವನ್ನು ತಯಾರು ಮಾಡಿದ್ದು, ಸಹಿ ಮಾಡಿರುವುದಿಲ್ಲ. ತನಿಖಾಧಿಕಾರಿಗಳು ಎದುರುದಾರರ ರಕ್ಷಣಾ ಹೇಳಿಕೆಯನ್ನು ಪಡೆದುಕೊಂಡಿದ್ದು, ಸದರಿಯವರು ತಾನು ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ,

ದೂರುದಾರರು ಯಾರೆಂಬುದು ನನಗೆ ಗೊತ್ತಿಲ್ಲ, ದೂರಿನಲ್ಲಿರುವ ಅಂಶ ಸತ್ಯಕ್ಕೆ ದೂರವಾಗಿರುತ್ತದೆ ಎಂದು ನಿವೇದಿಸಿಕೊಂಡಿರುತ್ತಾರೆ. ಎದುರುದಾರರ ಖಾಸಗಿ ಸಹಾಯಕ ಮಧುಸೂದನ್‌ಇವರ ರಕ್ಷಣಾ ಹೇಳಿಕೆಯನ್ನು ಬರೆದುಕೊಂಡಿದ್ದು, ತಾನು ಮಧ್ಯವರ್ತಿಯಾಗಿ ಕಳೆದ 6 ವರ್ಷಗಳಿಂದ ಆನೇಕಲ್ ತಾಲ್ಲೂಕು ಕಚೇರಿ ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿಯಲ್ಲಿ ಸಾರ್ವಜನಿಕರ ಕೆಲಸಕಾರ್ಯಗಳನ್ನು ಮಾಡಿಕೊಡುತ್ತೇನೆ ಎಂದು ಹೇಳಿರುತ್ತಾರೆ. ವೆಂಕಟಾಚಲಪತಿಯವರು ದೂರುದಾರರನ್ನು ಪರಿಚಯಿಸಿ, ಅವರ ಜೊತೆ ಕೆಳಗಡೆ ಹೋಗುವಂತೆ ತಿಳಿಸಿದ್ದು, ದೂರುದಾರರು 5 ಲಕ್ಷ ಹಣ ನೀಡಿದ್ದನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಪಂಚರನ್ನು ವಿಚಾರಿಸಲಾಗಿ ಎದುರುದಾರರು ನೀಡಿದ ಸಮಜಾಯಿಷಿ ಸರಿಯಲ್ಲವೆಂದು ಹಾಗೂ ಮಧುಸೂದನ್‌ರವರು ನೀಡಿರುವ ಸಮಜಾಯಿಷಿ ಸರಿಯಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 18/12/2017 ರಂದು ಮಧ್ಯಾಹ್ನ 2.30 ರಿಂದ ರಾತ್ರಿ 7.30 ಗಂಟೆಯವರೆಗೆ ಎದುರುದಾರರ ಕಾರ್ಯಾಲಯದಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಖಾಸಗಿ ಸಹಾಯಕ ಮಧುಸೂದನ್ ಇವರ ಎರಡೂ ಕೈಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಸದರಿಯವರ ಪ್ಯಾಂಟಿನಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಎದುರುದಾರರು ಪರೀವಿಕ್ಷಣಾ ಟಿಪ್ಪಣಿಗೆ ಸಮಾಜಯಿಷಿಯನ್ನು ಸಲ್ಲಿಸಿದ್ದು, ಸದರಿಯವರು ತಮ್ಮ ಸಮಾಜಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ಸರ್ಕಾರದ ಆದೇಶದ ಅನ್ವಯ ತಾನು 2017-18 ರಿಂದ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ವಿಶೇಷ ತಹಶೀಲ್ದಾರ್ ಆಗಿ ಕೆಲಸ ಮಾಡುತ್ತಿದ್ದು ಆರ್.ಆರ್.ಟಿ. ನಂ. 55/2013 ಇದು ಹಳೆಯ ಪ್ರಕರಣವಾಗಿದ್ದರಿಂದ ತ್ವರಿತವಾಗಿ ವಿಲೇ ಮಾಡಲು ಡಿಸಿಯವರು ಸೂಚಿಸಿದ ಮೇರೆಗೆ ಅಂತಿಮ ಆದೇಶಕ್ಕೆ ಕಾಯ್ದಿರಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ದೂರುದಾರರು ವಾದಿ/ಪ್ರತಿವಾದಿ ಇರುವುದಿಲ್ಲ. ಆ ಸಮಯದಲ್ಲಿ ಅಕ್ರಮ ನಿವೇಶನದಾರರಿಗೆ ಹಕ್ಕು ಪತ್ರ ನೀಡುವಂತೆ ಸರ್ಕಾರದಿಂದ ಆದೇಶವಾದ ಪ್ರಯುಕ್ತ ನಿವೇಶನಗಳಿಗೆ ಖುದ್ದು ಭೇಟಿ

ನೀಡಬೇಕಾಗಿದ್ದರಿಂದ ಈ ಪ್ರಸ್ತುತ ಪ್ರಕರಣವನ್ನು ಅಂತಿಮಗೊಳಿಸಲು ಸಾಧ್ಯವಾಗಿರಲಿಲ್ಲ. ಖಾಸಗಿ ಸಹಾಯಕ ಎಂದು ಹೇಳುವ ಮಧುಸೂದನ್ ಇವನಿಗೂ ಹಾಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ. ಸಂಭಾಷಣೆಯನ್ನು ಡಿವಿಡಿ ಯಲ್ಲಿ ರೆಕಾರ್ಡ ಮಾಡಿಕೊಂಡಿರುವುದು ತನಗೆ ಗೊತ್ತಿಲ್ಲ ಹಾಗೂ ಸದರಿ ಡಿವಿಡಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ತಾನು ಮಧುಸೂದನ್ ಈತನನ್ನು ಕರೆದು ಹಣ ಸ್ವೀಕರಿಸಲು ತಿಳಿಸಿಲ್ಲ. ಈ ಘಟನಾವಳಿಗಳು ಡಿಸಿ ಕಚೇರಿಯ 2 ನೇ ಮಹಡಿಯಲ್ಲಿ ನಡೆದಿದ್ದು ತನಗೆ ಮಾಹಿತಿ ಇಲ್ಲ. ತನ್ನಿಂದ ಯಾವುದೇ ಹಣವನ್ನು ಎ.ಸಿ.ಬಿ. ಯವರು ವಶಪಡಿಸಿಕೊಂಡಿಲ್ಲ. ತನ್ನ ಧ್ವನಿಯಲ್ಲಿ ಸ್ಪಷ್ಟತೆ ಇರುವುದಿಲ್ಲವೆಂದು ಹಾಗೂ ನಿಖರವಾಗಿ ತಿಳಿಸುವಂತಹ ಸಾಧನಗಳು ಇಲ್ಲವೆಂದು ತಜ್ಞರು ವರದಿ ನೀಡಿರುತ್ತಾರೆ. ಖಾಸಗಿ ಸಹಾಯಕ ಮಧುಸೂದನ್ ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆ ಬಗ್ಗೆ ನನಗೆ ಮಾಹಿತಿ ಇಲ್ಲ. ಸತ್ರ ನ್ಯಾಯಾಲಯದಲ್ಲಿ ಡಿಸ್ಚಾರ್ಜ ಅರ್ಜಿ ವಜಾ ಆಗಿದ್ದರಿಂದ ತಾನು ಉಚ್ಚ ನ್ಯಾಯಾಲಯದಲ್ಲಿ ರಿವಿಷನ್ ಅರ್ಜಿ ಸಂಖ್ಯೆ: 940/2021 ಸಲ್ಲಿಸಿರುತ್ತೇನೆ ಮತ್ತು ಅದರಲ್ಲಿ ಸ್ಟೇ ಆದೇಶವಾಗಿರುತ್ತದೆ. ಈ ಪ್ರಕರಣದಲ್ಲಿ ಅಂತಿಮ ಆದೇಶ ಹೊರಡಿಸಲು ವಿಳಂಬವಾಗಿದ್ದರಿಂದ ಎ.ಸಿ.ಬಿ. ಗೆ ದೂರು ಸಲ್ಲಿಸಿದ್ದಾರೆ. ಆದ್ದರಿಂದ ತನ್ನನ್ನು ಆರೋಪಗಳಿಂದ ಮುಕ್ತಗೊಳಿಸಬೇಕೆಂದು ನೀವೆದಿಸಿಕೊಂಡಿರುತ್ತಾನೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳಿರುವುದಿಲ್ಲ.

5. ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು

ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

28/4/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಗೌರವಾನ್ವಿತ ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.